**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.**

**ಅಪರಾಧ ಪ್ರಕರಣ ಸಂಖ್ಯೆ 658/2021**

**ಚಾಸಾಃ** 11 **ಫ್ರಾಸಾಃ** 9

| | |
|---|---|
| ಹೆಸರು | : ಜಯ ಪೂಜಾರಿ |
| ತಂದೆಯ ಹೆಸರು | : ಬಾಬು ಪೂಜಾರಿ |
| ಪ್ರಾಯ | : 64 ವರ್ಷ |
| ಉದ್ಯೋಗ | : ನಿವೃತ್ತ ಎ.ಎಸ್.ಐ. |
| ವಾಸ | : ಕುಕ್ಕೇಡಿ ಗ್ರಾಮ, ಬೆಳ್ತಂಗಡಿ ತಾಲೂಕು. |

**ದಿನಾಂಕ 08.09.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ನಾನು 2018 ರಿಂದ 2022 ಅಗಸ್ಟ್ 31 ರ ವರೆಗೆ ವೇಣೂರು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ 31.08.2020 ರಂದು ಠಾಣಾ ಪ್ರಭಾರದಲ್ಲಿದ್ದ ಸಮಯ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಸೂಚನಾ ಪತ್ರದ ಮೇರೆಗೆ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಹಲ್ಲೆಗೊಳಗಾಗಿ ಒಳರೋಗಿಯಾಗಿ ದಾಖಲಾಗಿದ್ದ ಚಾಸಾ 1 ಮತ್ತು 2 ರವರ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ಬಂದು ಠಾಣಾ ಅ.ಕ್ರ. 52/2020 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಮತ್ತು ನಿಪಿ1(ಸಿ) ಎಂದು** ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, **ಸದರಿ ದಾಖಲೆಯನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7 (ಎ) ಎಂದು** ಗುರುತಿಸಲಾಯಿತು. ನಂತರ ದಿಃ01.09.2020 ರಂದು ತಕ್ಷೀರು ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.15 ರವರೆಗೆ ನಿಪಿ 2 ರಂತೆ ತಕ್ಷೀರು

ಸ್ಥಳದ ಮಹಜರ್ ಜರುಗಿಸಿ, ಸ್ಥಳದಲ್ಲಿ ಕೃತ್ಯಕ್ಕೆ ಬಳಸಿದ ಎರಡು ಮುಷ್ಠಿ ಗಾತ್ರದ ಕಲ್ಲುಗಳು ಮತ್ತು ಸ್ವಲ್ಪ ಗಾಜಿನ ಚೂರುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಸದರಿ ಮಹಜರ್ ನಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, **ಸದರಿ ಸಹಿಯನ್ನು ನಿಪಿ 2(ಡಿ) ಎಂದು** ಗುರುತಿಸಲಾಯಿತು. ಸ್ವತ್ತುಗಳನ್ನು MO1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

2. ದಿಃ01.09.2020 ರಂದು ಚಾಸಾ 1 ರವರ ಮರುಹೇಳಿಕೆ, ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ 5 ರವರ ಹೇಳಿಕೆ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, **ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು** ಗುರುತಿಸಲಾಯಿತು. ದಿಃ04.09.2020 ರಂದು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರ ಪಡೆದುಕೊಳ್ಳಲು ಕೋರಿಕೆ ಪತ್ರ ನೀಡಿ ಸದರಿಯವರುಗಳ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ 5 ಮತ್ತು 6 ಎಂದು ಗುರುತಿಸಲಾಗಿರುತ್ತದೆ. ದಿಃ06.09.2020 ರಂದು ಕೃತ್ಯಕ್ಕೆ ಉಪಯೋಗಿಸಿದ KA41B2625 ರ ನೋಂದಣಿ ಸಂಖ್ಯೆಯ ಟಾಟಾ ಇಂಡಿಕಾ ಕಾರನ್ನು ಸ್ವತ್ತು ಸ್ವಾಧೀನ ಮಹಜರ್ ನಿಪಿ 4 ರಂತೆ ಸ್ವಾಧೀನಪಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಸಹಿಯನ್ನು ನಿಪಿ 4(ಸಿ) ಎಂದು** ಗುರುತಿಸಲಾಯಿತು. ತಕ್ಷೀರು ಸ್ಥಳದ ಮಾಲೀಕತ್ವದ ಬಗ್ಗೆ ಚಾಸಾ 10 ರವರಿಂದ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, **ಸದರಿ ದಾಖಲೆಯನ್ನು ನಿಪಿ 8 ಎಂದು** ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿನ ಆರೋಪಿಗಳು ಗೈರು ಹಾಜರಾಗಿದ್ದು ಆರೋಪಿಗಳ ಪರ ವಕೀಲರು ಗೈರು ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ). ದಿಃ24.10.2020 ರಂದು ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ಎಂ. ವಕೀಲರಿಂದಃ**

1ನೇ ಆರೋಪಿಯು ಚಾಸಾ 1 ರವರ ಅಳಿಯನಾಗಬೇಕು. ಚಾಸಾ 1 ರವರ ಮಗಳು ಮತ್ತು 1ನೇ ಆರೋಪಿಯ ನಡುವೆ ಕೌಟುಂಬಿಕ ವ್ಯಾಜ್ಯಗಳು ಇದ್ದವು ಎಂದರೆ ಸರಿ. ಚಾಸಾ 1 ರವರ ಮಗಳು ಮತ್ತು 1ನೇ ಆರೋಪಿಯ ನಡುವೆ ಕರಾರಿನ ಮೂಲಕ ವಿಚ್ಛೇದನವಾಗಿರುತ್ತದೆ ಎಂದರೆ

ಸರಿ. ನಾನು ಸದರಿ ಕರಾರಿನ ಪ್ರತಿಯನ್ನು ಪಡೆದುಕೊಂಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ 2 ರವರು ಲಿಖಿತ ದೂರು ನೀಡಿರುವುದಿಲ್ಲ. ದಿಃ31.08.2020 ರಂದು ದೂರಿನ ಪ್ರಕಾರ ಒಂದು ಘಟನೆ ನಡೆದಿರುತ್ತದೆ. ಸದರಿ ದಿನ ಚಾಸಾ 2 ರವರು ನಮ್ಮ ಠಾಣೆಗೆ ಬಂದಿರುವುದಿಲ್ಲ. ನಾವು ತಕ್ಷೀರು ಸ್ಥಳಕ್ಕೆ ಹೋದಾಗ ಗಾಜಿನ ಚೂರುಗಳು ಮನೆಯ ಒಳಗಡೆ ಇದ್ದವು. ಯಾವುದೇ ಕಿಟಕಿ ಗಾಜುಗಳಿಗೆ ಕಲ್ಲು ಎಸೆದ ಸಂದರ್ಭದಲ್ಲಿ ಗಾಜಿನ ಚೂರುಗಳು ಮನೆಯ ಒಳಗೆ ಮತ್ತು ಹೊರಗೆ ಬಿಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಸದರಿ ದಿನ ಕಿಟಕಿಯ ಗಾಜುಗಳು ಯಾವ ಪ್ರಮಾಣದಲ್ಲಿ ಹುಡಿಯಾಗಿದ್ದವು ಎಂಬ ಬಗ್ಗೆ ಪರಿಶೀಲಿಸಿ ನಮೂದು ಮಾಡಿರುವುದಿಲ್ಲ. ಆರೋಪಿಗಳು ಎಸೆದರು ಎನ್ನಲಾದ ಕಲ್ಲುಗಳ ಪೈಕಿ ಒಂದು ಕಲ್ಲು ಮನೆಯ ಹೊರಗೆ ಮತ್ತು ಒಂದು ಕಲ್ಲು ಮನೆಯ ಒಳಗೆ ಇದ್ದವು. ಈ ವಿಚಾರವನ್ನು ನಿಪಿ 2 ರಲ್ಲಿ ನಮೂದು ಮಾಡಿರುವುದಿಲ್ಲ. ಯಾವುದೇ ಒಬ್ಬ ವ್ಯಕ್ತಿಗೆ ಕಾಲಿನಿಂದ ತುಳಿದು ಮತ್ತು ಕೈಯಿಂದ ಹೊಡೆದಾಗ ದೇಹದಲ್ಲಿ ಊತದ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಅದೇ ರೀತಿ ಒಬ್ಬ ವ್ಯಕ್ತಿಯನ್ನು ನೆಲಕ್ಕೆ ಹಾಕಿ ನೆಲದಲ್ಲಿ ಊರುಡಾಟ ನಡೆಸಿದಾಗ ತರಚಿದ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಚಾಸಾ 1 ರವರಿಗೆ ಮುಂದಲೆಗೆ ಆದಂತಹ ಊನದ ಗಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿ.

2. ತಕ್ಷೀರು ದಿನ ಎಷ್ಟು ಕಿಟಕಿ ಗಾಜುಗಳು ಹೊಡೆದಿದ್ದವು ಎಂಬ ಬಗ್ಗೆ ನಾನು ತನಿಖೆ ಮಾಡಿರುತ್ತೇವೆ. ಒಂದು ಕಿಟಕಿ ಗಾಜು ಮಾತ್ರ ಒಡೆದಿತ್ತು. MO2 ಮತ್ತು 3 ರಲ್ಲಿ ಯಾವ ಕಲ್ಲು ಮನೆಯ ಒಳಗಡೆ ಮತ್ತು ಯಾವ ಕಲ್ಲು ಮನೆಯ ಹೊರಗಡೆ ಇತ್ತು ಎಂದು ಹೇಳಲಾಗುವುದಿಲ್ಲ. MO1 ರ ರೀತಿಯ ಗಾಜಿನ ಚೂರುಗಳು ಎಲ್ಲಿ ಬೇಕಾದರೂ ಸಿಗುತ್ತವೆ ಎಂದರೆ ಸರಿ. MO2 ಮತ್ತು 3 ರ ರೀತಿಯ ಕಲ್ಲುಗಳು ದಾರಿಯಲ್ಲಿ ಎಲ್ಲಿ ಬೇಕಾದರೂ ಸಿಗುತ್ತವೆ ಎಂದರೆ ಸರಿ. MO2 ಮತ್ತು 3 ರ ಕಲ್ಲಿನಿಂದಲೇ ಆರೋಪಿಗಳು ಹಲ್ಲೆ ಮಾಡಿದ್ದಾರೆ ಎಂಬ ಬಗ್ಗೆ ಅವುಗಳಲ್ಲಿ ವಿಶೇಷ ಗುರುತು ಮಾಡಿಕೊಂಡಿರುವುದಿಲ್ಲ. ನಿಪಿ 2 ನ್ನು ಜರುಗಿಸುವಾಗ ಪಂಚರನ್ನು ನಾನೇ ಬರಮಾಡಿಕೊಂಡಿರುತ್ತೇನೆ. ಅವರಿಗೆ ನೋಟಿಸ್ ನೀಡಿರುವುದಿಲ್ಲ, ಫೋನ್ ಮಾಡಿರುತ್ತೇನೆ. ತಕ್ಷೀರು ಮನೆಯ ಆಸುಪಾಸಿನಲ್ಲಿ ಬೇರೆ ಮನೆಗಳು ಇರುವುದಿಲ್ಲ. 100 ಮೀಟರ್ ಗಿಂತ ದೂರದಲ್ಲಿ ಚಾಸಾ 5 ರವರ ಮನೆ ಇರುತ್ತದೆ. ನಾನು ತಕ್ಷೀರು ಸ್ಥಳಕ್ಕೆ ಹೋದದ್ದೆ ಇಲ್ಲ, ನಾನು ತಕ್ಷೀರು ಸ್ಥ,ಳದಲ್ಲಿ ನಿಪಿ 2 ಕ್ಕೆ ಯಾವುದೇ ಸಹಿ ಮಾಡಿರುವುದಿಲ್ಲ, ಪೊಲೀಸ್ ಠಾಣೆಯಲ್ಲಿ ತಯಾರಿಸಿದ ನಿಪಿ 2ಕ್ಕೆ ಅಲ್ಲಿಯೇ ಪಂಚರು ಹಾಗೂ

ನಾವುಗಳು ಸಹಿ ಮಾಡಿ ಆರೋಪಿಗಳಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಮತ್ತು ಮರುಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿರುವ MO1 ರಿಂದ 3 ಕ್ಕೂ ಹಾಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಕೂಡಾ ಅದೇ ದಿನ ಚಾಸಾ 1 ಮತ್ತು 2 ರವರ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರಿಗೆ ನಾವು ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಕರಾರಿನ ಷರತ್ತುಗಳಿಗೆ ಅನುಗುಣವಾಗಿ ಆರೋಪಿಯು ಚಾಸಾ 1 ರವರ ಮನೆಗೆ ಮಗುವನ್ನು ನೋಡಲು ಹೋದಾಗ ಚಾಸಾ 1 ರಿಂದ 3 ರವರು 1ನೇ ಆರೋಪಿಯ ಮೇಲೆ ಹಲ್ಲೆ ನಡೆಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ದೂರು ನೀಡುತ್ತಾರೆ ಎಂಬ ಅನುಮಾನದಿಂದ ಚಾಸಾ 1 ರಿಂದ 3 ರವರು ಸೇರಿ ಸದರಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ನಡೆಸದೆ ಆರೋಪಿಗಳ ವಿರುದ್ಧ ಒಂದು ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ MO1 ರಿಂದ 3 ಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)